## ಅಧ್ಯಾಯ-೪
# ಕೃಷಿ ಮತ್ತು ನೀರಾವರಿ

ಜಲಾಶಯಗಳು, ಕೊಳವೆ ಬಾವಿಗಳು, ಕೆರೆಗಳು, ತಾಲೂಕಿನ ಭೂಪ್ರದೇಶ ನೀರಾವರಿಯಾಗಲು ಹೆಚ್ಚಿನ ಸಹಕಾರಿಯಾಗಿದ್ದು, ತಾಲೂಕಿನಲ್ಲಿ ನೀರಾವರಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಬೆಳೆಯಲು ಸಾಧ್ಯವಾಗಿದೆ. ತಾಲೂಕಿನಲ್ಲಿ ನಿರ್ಮಿಸಲಾಗಿರುವ ಕಬಿನಿ, ತಾರಕ, ನುಗು, ಹೆಬ್ಬಳ್ಳ ಮೊದಲಾದ ಜಲಾಶಯಗಳು; ಕೊಳವೆ ಬಾವಿಗಳು, ಅಭಿವೃದ್ಧಿಪಡಿಸಿರುವ ಕೆರೆಗಳು, ರೈತರಿಗೆ ವರದಾನವಾಗಿದೆ. ಇದರಿಂದ ಭತ್ತ, ಕಬ್ಬು, ಹತ್ತಿ, ರೇಷ್ಮೆ, ಹೊಗೆಸೊಪ್ಪು ಮೊದಲಾದ ವಾಣಿಜ್ಯಬೆಳೆಗಳನ್ನು ಬೆಳೆಯುವುದರ ಜೊತೆಗೆ ತೋಟಗಾರಿಕೆಯ ಬೆಳೆಗಳಾದ ಬಾಳೆ, ಅಡಿಕೆ, ತೆಂಗು, ವಿವಿಧ ಬಗೆಯ ತರಕಾರಿಗಳನ್ನು ಬೆಳೆಯಲಾಗುತ್ತದೆ.

ಹೆಗ್ಗಡದೇವನಕೋಟೆ ಪ್ರದೇಶವು ದಟ್ಟವಾದ ಅರಣ್ಯ ಪ್ರದೇಶದಿಂದ ಕೂಡಿದೆ. ದಕ್ಷಿಣ ಪ್ರಸ್ಥಭೂಮಿಯು ಏರಿಳಿತಗಳಿಂದ ಕೂಡಿದ್ದು, ಸಮುದ್ರಮಟ್ಟದಿಂದ ಸುಮಾರು ೯೦೦ ಮಿ. ಎತ್ತರದಲ್ಲಿದೆ. ಈ ಭೂಪ್ರದೇಶವು ಸಮಶೀತೋಷ್ಣ ವಾಯುಗುಣದಿಂದ ಕೂಡಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿರುವ ಪರ್ವತ ಶ್ರೇಣಿಯ ಘಟ್ಟ ಪ್ರದೇಶಗಳು ತಾಲೂಕಿನಲ್ಲಿ ಹೆಚ್ಚು ಮಳೆ ಬೀಳಲು ಕಾರಣವಾಗಿವೆ. ಕಾವೇರಿ ನದಿಯ ಉಪನದಿಯಾದ ಕಪಿಲಾ, ಮತ್ತದರ ಉಪನದಿಗಳಿಗೆ ನಿರ್ಮಿಸಿರುವ ಜಲಾಶಯಗಳು ಸ್ವಲ್ಪಮಟ್ಟಿಗೆ ತಾಲೂಕಿನಲ್ಲಿ ನೀರಾವರಿಗೆ ಸೌಕರ್ಯವನ್ನು ಕಲ್ಪಿಸಿವೆ. ಜೊತೆಗೆ ವಿದ್ಯುತ್ ಉತ್ಪಾದನಾ ಕೇಂದ್ರ ಕೂಡ ಇದೆ.

ಈ ತಾಲೂಕಿನಲ್ಲಿ ಅಂತರ್ಜಲ ಸಮೃದ್ಧವಾಗಿದ್ದು, ವ್ಯವಸಾಯಕ್ಕೆ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗಿದೆ. ಕೊಳವೆಬಾವಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೊರೆಯಲಾಗಿದೆ. ಸುಮಾರು ೨೯೫-೧೫ ಕೋಟಿ ವರ್ಷಗಳಷ್ಟು ಪ್ರಾಚೀನವಾದ ಈ ಭೂಭಾಗವು ಸರಗೂರು ಮೇಲುಹೊದಿಕೆ ಪದರಶಿಲೆಗಳನ್ನು ಹೊಂದಿದ್ದು, ದಕ್ಷಿಣ ಪ್ರಸ್ಥಭೂಮಿಯ ಭಾಗವಾಗಿರುವುದರಿಂದ ಭೂಕಂಪಮುಕ್ತ ಪ್ರದೇಶವೆಂದು ಭಾವಿಸಿದ್ದರೂ ತಾಲೂಕಿನ ವಿವಿಧ ಕಡೆ ಭೂಕಂಪದ ಅನುಭವವಾಗಿರುವುದು ತಿಳಿದು ಬರುತ್ತದೆ.

ಏತ ನೀರಾವರಿಯ ಮೂಲಕವೂ ತಾಲೂಕಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಜಮೀನಿಗೆ ನೀರನ್ನು ಒದಗಿಸಿ ಭತ್ತ, ಕಬ್ಬು, ರೇಷ್ಮೆ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ಹಿಂದಿನಕಾಲದಲ್ಲಿ ರೈತರು ಮರದ ನೇಗಿಲು, ಮರದ ಕುಂಟೆ, ಹಲಗೆ ಮುಂತಾದವನ್ನು ಬಳಸಿ ಬೇಸಾಯ ಮಾಡುತ್ತಿದ್ದರು. ಈಗ ಉಳುಮೆ ಮಾಡಲು ಟಿಲ್ಲರ್ ಹಾಗೂ ಟ್ರಾಕ್ಟರ್‌ಗಳನ್ನು ಬಳಸುತ್ತಿದ್ದಾರೆ. ಗದ್ದೆಗಳ ನಾಟಿಗೆ, ಬೆಳೆಯ ಒಕ್ಕಣೆಗೆ ಯಂತ್ರೋಪಕರಣಗಳನ್ನು ದೊಡ್ಡ ಹಿಡುವಳಿದಾರರು ಬಳಸುತ್ತಾರೆ. ಮುಂಗಾರು ಸಮಯದಲ್ಲಿ ಉತ್ತಮ ಮಳೆಯಾದ ನಂತರ ಬಿತ್ತನೆಕಾರ್ಯ ಪ್ರಾರಂಭಗೊಳ್ಳುತ್ತದೆ. ಏಪ್ರಿಲ್–ಮೇನಲ್ಲಿ ಎಳ್ಳು, ತಂಬಾಕು, ದ್ವಿದಳ ಧಾನ್ಯ, ರಾಗಿ ಬೆಳೆ ಹಾಗೂ ಮುಂಗಾರಿನಲ್ಲಿ ಬಿತ್ತನೆ ಮಾಡಿದ ರಾಗಿ, ಭತ್ತ, ದ್ವಿದಳ ಧಾನ್ಯಗಳು ಉತ್ತಮವಾಗಿ ಫಸಲು ನೀಡುತ್ತವೆ.

**ಕೃಷಿಕ ಜನಸಂಖ್ಯೆ :** ೧೯೮೧ರ ಜನಗಣತಿಯಂತೆ ಈ ತಾಲೂಕಿನಲ್ಲಿ ೬೫,೯೭೯ ಮುಖ್ಯ ಕೆಲಸಗಾರರಿದ್ದು, ಅದರಲ್ಲಿ ೩೭,೩೬೫ ವ್ಯವಸಾಯಗಾರರಿದ್ದು, ೧೮,೬೦೮ ಜನ ಕೃಷಿ ಕಾರ್ಮಿಕರಿದ್ದರು. ಅದೇ ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ೧,೦೩,೧೭೧ ಜನ ಮುಖ್ಯ ಕೆಲಸಗಾರರು ಹಾಗೂ ೨೨,೨೪೨ ಜನ ಅರೆಕಾಲಿಕ ಕೆಲಸಗಾರರಿದ್ದರು. ಮುಖ್ಯ ಕೆಲಸಗಾರರಲ್ಲಿ ೬೩,೮೧೫ (೪೧,೮೪೫ ಪುರುಷರು ಹಾಗೂ ೨೧,೯೭೦ ಮಹಿಳೆಯರು) ಕೃಷಿ ಸಾಗುವಳಿಗಾರರು, ೪೩,೭೦೯ (೧೯,೮೦೧ ಪುರುಷರು ಹಾಗೂ ೨೩,೯೦೮ ಮಹಿಳೆಯರು) ಕೃಷಿಕಾರ್ಮಿಕರು ಹಾಗೂ ಇತರೆ ಸೇವೆಗಳಲ್ಲಿ ೧೬,೪೩೯ (೧೩,೦೬೬ ಪುರುಷರು ಹಾಗೂ ೩,೩೭೩ ಮಹಿಳೆಯರು) ಮಂದಿ ತಮ್ಮನ್ನು ತೊಡಗಿಸಿಕೊಂಡಿದ್ದರು.

**ಭೂ ಬಳಕೆ :** ತಾಲೂಕಿನಲ್ಲಿ ವಾಡಿಕೆ ಮಳೆ ಸರಾಸರಿ ೯೦೩.೦೫ ಮಿ.ಮೀ. ಇದ್ದು, ೨೦೦೭–೦೮ರಲ್ಲಿ ತಾಲೂಕಿನಲ್ಲಿ ಇದ್ದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೯೪,೧೩೮ ಹೆಕ್ಟೇರ್. ಅರಣ್ಯ ಪ್ರದೇಶ ೩೩೦೩೧ ಹೆಕ್ಟೇರ್ ಇದೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿಯಲ್ಲಿ ಇತರೆ ಉದ್ದೇಶಗಳಿಗೆ ಉಪಯೋಗಿಸಿಕೊಂಡಿರುವ ಪ್ರದೇಶ ೧೮,೮೫೧ ಹೆಕ್ಟೇರ್. ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶ ೧,೬೭೯ ಹೆಕ್ಟೇರ್. ಸಾಗುವಳಿ ಮಾಡದಿರುವ ಇತರೆ ಭೂಮಿಯಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ೧೩೮೪೬ ಹೆಕ್ಟೇರ್, ಖಾಯಂ ಗೋಮಾಳ ೩೩,೮೬೫ ಹೆಕ್ಟೇರ್, ವೃಕ್ಷ ಮತ್ತು ತೋಪುಗಳು ೩,೧೦೩ ಹೆಕ್ಟೇರ್, ಬೀಳು ಭೂಮಿಯಲ್ಲಿ ಚಾಲ್ತಿಗೆ ೨,೮೯೧ ಹೆಕ್ಟೇರ್ ಹಾಗೂ ಇತರೆ ೪,೮೦೦ ಹೆಕ್ಟೇರ್ ಇರುತ್ತದೆ.

**ಭೂ ಹಿಡುವಳಿ ಪ್ರಮಾಣ :** ೨೦೦೫–೦೬ರ ಕೃಷಿಗಣತಿ ಪ್ರಕಾರ ತಾಲೂಕಿನಲ್ಲಿ ಒಂದು ಹೆಕ್ಟೇರ್ ಒಳಗಿನ ೨೧,೫೦೭ ಅತಿ ಸಣ್ಣ ಹಿಡುವಳಿದಾರರಿದ್ದು, ಇದರ ವಿಸ್ತೀರ್ಣ ೧೦,೪೭೯ ಹೆ. ಆಗಿತ್ತು. ೧–೨ ಹೆ. ಭೂಮಿಯನ್ನು ಹೊಂದಿರುವ ೧೭,೮೧೨ ಸಣ್ಣ ಹಿಡುವಳಿದಾರರ ಕೃಷಿಗೆ ೨೪,೩೯೨ ಹೆ. ಜಮೀನು ಒಳಪಟ್ಟಿತ್ತು.

೨-೪ ಹೆ. ಜಮೀನನ್ನುಳ್ಳ ೫,೮೧೯ ಅರೆಮಧ್ಯಮ ಹಿಡುವಳಿದಾರರ ಕೈಯಲ್ಲಿ ೧೫,೨೯೪ ಹೆ. ಭೂಮಿ; ೪-೧೦ ಹೆ. ಜಮೀನನ್ನುಳ್ಳ ೧,೫೨೬ ಮಧ್ಯಮಗಾತ್ರದ ಹಿಡುವಳಿದಾರರ ಕೈಯಲ್ಲಿ ೮,೨೬೮ ಹೆ. ಜಮೀನು; ಹಾಗೂ ೧೦ ಹೆ. ಗಿಂತ ಹೆಚ್ಚು ಜಮೀನನ್ನುಳ್ಳ ೧೧೩ ಭೂ ಹಿಡುವಳಿದಾರರ ಕೈಯಲ್ಲಿ ೧,೫೨೯ ಹೆ. ಜಮೀನು ಒಳಪಟ್ಟಿತ್ತು.

ತಾಲೂಕಿನಲ್ಲಿ ೨೦೦೭-೦೮ರ ಸಾಲಿನಲ್ಲಿ ನೀರಾವರಿ ಹೊಂದಿರುವ ಪ್ರದೇಶ-ಕಾಲುವೆಗಳಿಂದ ೭,೯೯೦ ಹೆಕ್ಟೇರ್, ಕೆರೆಗಳಿಂದ ೧,೩೨೦ ಹೆಕ್ಟೇರ್, ಬಾವಿಗಳಿಂದ ೧,೪೦೦ ಹೆಕ್ಟೇರ್, ಕೊಳವೆಬಾವಿಗಳಿಂದ ೪೧೭ ಹೆಕ್ಟೇರ್. ಎಲ್ಲಾ ಸೇರಿ ಒಟ್ಟು ೧೧,೧೨೭ ಹೆ. ನೀರಾವರಿಯಾಗಿತ್ತು. ತಾಲೂಕಿನಲ್ಲಿ ಭತ್ತ(೭೯೫ ಹೆ.), ರಾಗಿ(೧೪೩೧೧ ಹೆ.), ಜೋಳ(೪೯೮ ಹೆ.), ಮುಸುಕಿನಜೋಳ(೧೬೩೨ ಹೆ.), ಕಡಲೆ(೫೦ ಹೆ.), ತೊಗರಿ(೬೮೦ ಹೆ.), ನೆಲಗಡಲೆ(೪೭೧ ಹೆ.), ಸೂರ್ಯಕಾಂತಿ(೧೧ ಹೆ.) ಹಾಗೂ ಇತರೆ ಎಣ್ಣೆಕಾಳು(೧೪೮೦ ಹೆ.) ಬೆಳೆಗಳನ್ನು ಸಾಗುವಳಿ ಜಮೀನಿನಲ್ಲಿ ಬೆಳೆಯಲಾಗುತ್ತದೆ. ಆರ್ಥಿಕ ಬೆಳೆಗಳಾದ ಕಬ್ಬು, ತಂಬಾಕು, ಹತ್ತಿಯನ್ನು ಬೆಳೆಯುತ್ತಾರೆ. ಹಿಪ್ಪುನೇರಳೆ ಬೆಳೆ ಕೂಡ ಬೆಳೆಯುತ್ತಾರೆ. ೧೦೧೮ ಹೆಕ್ಟೇರ್‌ಗಳಲ್ಲಿ ಕಬ್ಬು, ೪೪೧೫ ಹೆಕ್ಟೇರ್‌ನಲ್ಲಿ ತಂಬಾಕು, ೩೦೧೦೦ ಹೆಕ್ಟೇರ್‌ನಲ್ಲಿ ಹತ್ತಿ ಹಾಗೂ ಇತರೆ ಆರ್ಥಿಕ ಬೆಳೆಗಳನ್ನು ೧೪೮೫ ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದು ಒಟ್ಟು ೩೬,೦೦೦ ಹೆಕ್ಟೇರ್ ಪ್ರದೇಶದಲ್ಲಿ ಇತರೆ ಆಹಾರೇತರ ಬೆಳೆ ಬೆಳೆಯಲಾಗುತ್ತಿತ್ತು. ಎಲ್ಲಾ ಬೆಳೆಗಳ ಒಟ್ಟು ವಿಸ್ತೀರ್ಣ ೨೮,೯೨೪ ಹೆಕ್ಟೇರ್ ಆಗಿದೆ.

**ಹಿಪ್ಪುನೇರಳೆ :** ರೇಷ್ಮೆ ಕೃಷಿಗೆ ಪೂರಕವಾಗಿ ಹಿಪ್ಪುನೇರಳೆ ಸೊಪ್ಪನ್ನು ಬೆಳೆಯಲಾಗುತ್ತದೆ. ತಾಲೂಕಿನಲ್ಲಿ ರೇಷ್ಮೆಕೃಷಿಯು ರೈತರ ಪ್ರಮುಖ ಉಪಕಸುಬಾಗಿದೆ. ೧೯೯೨-೯೩ರ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು ೭೨೦ ಹೆ. ಭೂಮಿಯಲ್ಲಿ ಹಿಪ್ಪುನೇರಳೆ ಸೊಪ್ಪಿನ ಕೃಷಿಯನ್ನು ಮಾಡಲಾಗಿತ್ತು. ತಾಲೂಕಿನಲ್ಲಿ ಎಂಟು ಚಾಕಿ ಸಾಕಾಣಿಕೆ ಕೇಂದ್ರಗಳಿದ್ದು, ಒಟ್ಟು ೧೦೬ ಟನ್ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿತ್ತು. ಅದೇ ೨೦೦೮-೦೯ರ ಸಾಲಿನಲ್ಲಿ ಕೇವಲ ೭೯.೧೯ ಹೆ. ಭೂಮಿಯನ್ನು ಹಿಪ್ಪುನೇರಳೆ ಬೆಳೆಗೆ ಬಳಸಿಕೊಳ್ಳಲಾಗಿತ್ತು.೫೮.೭೬ ಟನ್ ಗೂಡನ್ನು ಉತ್ಪಾದಿಸಲಾಗಿದ್ದು, ೧೫೦ ರೈತರು ಈ ಕಸುಬಲ್ಲಿ ತೊಡಗಿದ್ದು ಒಟ್ಟು ೭೦.೯೯ ಲಕ್ಷ ರೂ. ಮೌಲ್ಯದ ರೇಷ್ಮೆಯನ್ನು ಉತ್ಪಾದಿಸಲಾಗಿತ್ತು.

**ಒಣಬೇಸಾಯ :** ತಾಲೂಕಿನಲ್ಲಿ ಬಹುಹಿಂದಿನಿಂದ ನೀರಾವರಿ ಸೌಲಭ್ಯವಿದ್ದರೂ, ಹೆಚ್ಚಿನ ಭಾಗ ಒಣಬೇಸಾಯವನ್ನೇ ಅವಲಂಬಿಸಿದ್ದು, ಅದೇ ಪರಿಸ್ಥಿತಿ ಇಂದಿಗೂ ಇದೆ. ತಾಲೂಕಿನಲ್ಲಾಗುವ ಮಳೆಯೂ ಕಡಿಮೆ ಇದ್ದು, ಅದರ ವಿತರಣೆಯೂ ಸಮನಾಗಿಲ್ಲ. ಆ ಕಾರಣದಿಂದ ತಾಲೂಕಿನ ಕೆಲಭಾಗವು ಅನಾವೃಷ್ಟಿಯಿಂದಾಗಿ ಬರಕ್ಕೆ ತುತ್ತಾದರೆ, ಅತಿವೃಷ್ಟಿಯಿಂದಾಗಿ ನದಿಯಂಚಿನ ಗ್ರಾಮಗಳು ಪ್ರವಾಹಕ್ಕೆ ಸಿಲುಕಿ ನಷ್ಟಕ್ಕೊಳಗಾಗುವುದುಂಟು. ಒಣಬೇಸಾಯ ಪ್ರದೇಶದಲ್ಲಿ ಮೇಲ್ಮಣ್ಣಿನ ಸಂರಕ್ಷಣೆ, ಹರಿವ

ನೀರಿನ ನಿಯಂತ್ರಣ, ಬೆಳೆಯ ಆಯ್ಕೆಯಲ್ಲಿ ಸೂಕ್ತ ಬದಲಾವಣೆ ಮುಂತಾದವನ್ನು ವಾರ್ಷಿಕ ಮಳೆಗಳಲ್ಲಿನ ವ್ಯತ್ಯಾಸವನ್ನಾಧರಿಸಿ ಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲೂ ಫಲವತ್ತತೆಯನ್ನು ಕಾಯ್ದಿಟ್ಟುಕೊಳ್ಳುವ ದೃಷ್ಟಿಯಿಂದ ಮೇಲ್ಮಣ್ಣಿನ ಸಂರಕ್ಷಣೆ ಅತ್ಯಗತ್ಯವಾಗಿದ್ದು, ಮಣ್ಣು ಸಂರಕ್ಷಣೆಗೆ ಪೂರಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಜಮೀನಿನಲ್ಲಿ ಮಳೆನೀರಿನ ಹರಿವನ್ನು ನಿಯಂತ್ರಿಸುವ ಮೂಲಕ ಮೇಲ್ಮಣ್ಣನ್ನು ಸಂರಕ್ಷಿಸುವ ಸಲುವಾಗಿ ಒಡ್ಡನ್ನು ನಿರ್ಮಿಸುವ ಕ್ರಮಕೈಗೊಳ್ಳಲಾಗಿದೆ. ಅದರಂತೆ ತಾಲೂಕಿನಲ್ಲೂ ಸುಮಾರು ೪೫,೫೨೭ ಹೆ. ಜಮೀನಿನ ಮೇಲ್ಮಣ್ಣಿನ ಸವಕಳಿಯನ್ನು ತಡೆಗಟ್ಟುವ ಕಾರ್ಯಕ್ರಮವನ್ನು ೧೯೭೮ರಲ್ಲಿ ರೂಪಿಸಲಾಗಿದ್ದು, ೧೯೮೫ರ ಮಾರ್ಚ್ ಅಂತ್ಯಕ್ಕೆ ೯೦೨ ಹೆ.ಗಳಲ್ಲಿ ಒಡ್ಡನ್ನು ನಿರ್ಮಿಸಲಾಗಿತ್ತು. ಅಲ್ಲದೆ ಕೃಷಿ ನಿರ್ವಹಣೆ ಅಧ್ಯಯನಕ್ಕಾಗಿ ೧೯೭೬-೭೭ರ ಸಾಲಿನಲ್ಲಿ ತಾಲೂಕಿನ ಕಂಟೆಗಾಮನಹಳ್ಳಿ ಹಾಗೂ ಪಣಹಳ್ಳಿ ಗ್ರಾಮಗಳನ್ನು ಆಯ್ಕೆ ಮಾಡಿ ಅವನ್ನು ಮಾದರಿಯಾಗಿಟ್ಟುಕೊಂಡು ಪ್ರತಿ ಹೆ. ಜಮೀನಿನಲ್ಲಿ ಕೃಷಿ ಮಾಡಿ ವಿವಿಧ ಬೆಳೆಗಳ ಉತ್ಪನ್ನ ಪಡೆಯಲು ತಗಲುವ ವೆಚ್ಚವನ್ನು ತಿಳಿಯಲು ಯತ್ನಿಸಲಾಗಿತ್ತು. ಈ ಕ್ರಿಯೆ ನಿರಂತರವಾಗಿ ನಡೆದಿದ್ದು, ರಾಜ್ಯ ಜಲಾನಯನ ಇಲಾಖೆಯು ಪ್ರತ್ಯೇಕ ಅಸ್ತಿತ್ವದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಅದರ ವ್ಯಾಪ್ತಿಗೆ ಈ ಚಟುವಟಿಕೆಗಳು ಒಳಪಡುತ್ತವೆ.

**ಸಮಗ್ರ ಕೃಷಿಬೆಳೆ ವಿಮಾ ಯೋಜನೆ :** ರೈತರ ಬೆಳೆಗಳು ಪ್ರಕೃತಿ ವಿಕೋಪಕ್ಕೆ ತುತ್ತಾಗುವುದರಿಂದ ಪ್ರತಿ ಹಂಗಾಮಿನಲ್ಲೂ ರೈತರು ನಷ್ಟಕ್ಕೆ ಈಡಾಗುವುದು ಸಾಮಾನ್ಯ. ಅವರಿಗೆ ಆದ ನಷ್ಟವನ್ನು ಭರಿಸುವುದರ ಜೊತೆಗೆ ಮುಂದಿನ ಹಂಗಾಮಿನಲ್ಲಿ ಬೆಳೆಸಾಲ ಪಡೆಯಲು ಅರ್ಹತೆಯನ್ನು ಉಳಿಸುವ ಸಲುವಾಗಿ ಕೇಂದ್ರ-ರಾಜ್ಯ ಸರ್ಕಾರಗಳು ಜಂಟಿಯಾಗಿ ವ್ಯಾಪಕ ಬೆಳೆವಿಮಾ ಯೋಜನೆಯನ್ನು ೧೯೮೫ರ ಮುಂಗಾರು ಹಂಗಾಮಿನಿಂದ ರಾಜ್ಯದಾದ್ಯಂತ ಪ್ರಾರಂಭಿಸಿದವು. ಈ ಯೋಜನೆಯಡಿ ಆಯ್ದ ಏಕ/ದ್ವಿದಳ ಧಾನ್ಯಗಳ ಸಾಗುವಳಿಗೆ ಬೆಳೆಸಾಲವನ್ನು ಸಹಕಾರಿ ಬ್ಯಾಂಕು, ವಾಣಿಜ್ಯ ಬ್ಯಾಂಕು ಹಾಗೂ ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಂದ ಪಡೆಯುವ ಎಲ್ಲಾ ರೈತರಿಗೂ ಬೆಳೆ ವಿಮಾ ಯೋಜನೆಯನ್ನು ಕಡ್ಡಾಯ ಮಾಡಲಾಗಿದೆ.

ಈ ಯೋಜನೆಯಡಿ, ಪ್ರತಿ ಹಂಗಾಮಿನಲ್ಲೂ ನಿರ್ಧಿಷ್ಟ ಕ್ಷೇತ್ರಗಳಲ್ಲಿ ಬೆಳೆ ಕಟಾವು ಸಮೀಕ್ಷೆಯನ್ನು ಆಧರಿಸಿ, ನಷ್ಟದ ಪ್ರಮಾಣವನ್ನು ತಾಲೂಕು ಮಟ್ಟದಲ್ಲಿ ನಿರ್ಧರಿಸಿ ನಷ್ಟ ಪರಿಹಾರದ ಮೊತ್ತವನ್ನು ಮುಂಬೈನ ಭಾರತೀಯ ಸಾಮಾನ್ಯ ವಿಮಾ ನಿಗಮ ಹಾಗೂ ರಾಜ್ಯ ಸರ್ಕಾರಗಳು ೨:೧ರ ಅನುಪಾತದಲ್ಲಿ ಭರಿಸುತ್ತಿವೆ. ಮುಂದೆ ನಷ್ಟ ಪ್ರಮಾಣವನ್ನು ಹೋಬಳಿ ಮಟ್ಟದಲ್ಲಿ ನಿರ್ಧರಿಸಿ ಪರಿಹಾರ ನೀಡುವ ವಿಚಾರವಿದೆ. ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ವಿಮಾ ಕಂತಿನ ಮೇಲೆ ನೀಡಬೇಕಾದ ಶೇ.೫೦ರ ಸಹಾಯಧನವನ್ನು ಕೇಂದ್ರ-ರಾಜ್ಯ ಸರ್ಕಾರಗಳು ಸಮಪ್ರಮಾಣದಲ್ಲಿ ನೀಡುತ್ತಿದ್ದು, ಇದರಿಂದ ತಾಲೂಕಿನ ರೈತರಿಗೂ ಅನುಕೂಲವಾಗುತಿದೆ.

**ಕೃಷಿ ಪ್ರಶಸ್ತಿ :** ರೈತರ ಸತತ ಪರಿಶ್ರಮ ಹಾಗೂ ಕ್ರಿಯಾಶೀಲತೆಗಳಿಂದಾಗಿ ಕೃಷಿ ಉತ್ಪಾದನೆಯಲ್ಲಿ ಗಣನೀಯ ಅಭಿವೃದ್ಧಿಯಾಗಿದ್ದು, ಅಂತಹ ಸೃಜನಶೀಲ ರೈತರನ್ನು ಗುರುತಿಸಿ ತಾಲೂಕು ಮಟ್ಟದಲ್ಲೂ ಕೃಷಿ ಪ್ರಶಸ್ತಿ ಬಹುಮಾನವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಆಯ್ಕೆ ಮಾಡಲಾದ ಬೆಳೆಗಳಿಗೆ ತಾಲೂಕು ಮಟ್ಟದಲ್ಲೂ ತಲಾ ಮೂರು ಬಹುಮಾನಗಳನ್ನು ನೀಡಲಾಗುತ್ತಿದ್ದು, ಪ್ರಥಮ ಬಹುಮಾನ ೨೫,೦೦೦ ರೂ. ದ್ವಿತೀಯ ಬಹುಮಾನ ೧೦,೦೦೦ ಹಾಗೂ ತೃತೀಯ ಬಹುಮಾನ ೫,೦೦೦ ರೂ.ಗಳಾಗಿದೆ.

**ನೀರಾವರಿ**

ಮಳೆ ಆಧಾರಿತ ಒಣಬೇಸಾಯ ಪದ್ಧತಿಯು ಬಹುಹಿಂದಿನಿಂದಲೂ ತಾಲೂಕಿನಾದ್ಯಂತ ಪ್ರಧಾನವಾಗಿ ಚಾಲ್ತಿಯಲ್ಲಿದ್ದರೂ ನದಿ, ಕೆರೆ, ಬಾವಿಗಳನ್ನು ಬಳಸಿ ನೀರಾವರಿ ಸೌಕರ್ಯ ರೂಪಿಸಿಕೊಂಡು ಸುಧಾರಿತ ಕೃಷಿಪದ್ಧತಿಯನ್ನು ರೈತರು ಅನುಸರಿಸುತ್ತಿದ್ದ ಅಂಶವನ್ನು ಗಂಗರ ಕಾಲದಷ್ಟು ಹಿಂದಕ್ಕೆ ಶಾಸನಾಧಾರಗಳಿಂದ ಗುರುತಿಸಬಹುದಾಗಿದೆ. ಗಂಗ, ಹೊಯ್ಸಳ, ವಿಜಯನಗರ, ಮೈಸೂರು ಅರಸರ ಕಾಲಕ್ಕೆ ಸೇರಿದ ಪ್ರಾಚೀನ ಕೆರೆಗಳು ತಾಲೂಕಿನ ವಿವಿಧೆಡೆ ಈಗಲೂ ಉಪಯೋಗಿಸಲ್ಪಡುತ್ತಿವೆ.

ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಕೃಷಿ, ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆಗಾಗಿ ಜಲಾಶಯಗಳನ್ನು ನಿರ್ಮಾಣ ಮಾಡಲಾಗಿದೆ. ಕಬಿನಿ, ತಾರಕಾ, ನುಗು, ಹೆಬ್ಬಳ್ಳಗಳು ತಾಲೂಕಿನಲ್ಲಿರುವ ಮುಖ್ಯ ಜಲಾಶಯಗಳಾಗಿದ್ದು, ಅವುಗಳ ವಿವರವನ್ನಿಲ್ಲಿ ನೀಡಲಾಗಿದೆ.

**ಕಬಿನಿ ಜಲಾಶಯ :** ಕಬಿನಿ ಜಲಾಶಯದ ನಿರ್ಮಾಣ ಕಾರ್ಯವು ೧೯೫೯ ರಲ್ಲಿ ಪ್ರಾರಂಭಗೊಂಡಿತು. ಬಿದರಹಳ್ಳಿ–ಬೀಚನಹಳ್ಳಿ ಸಮೀಪ, ಇದನ್ನು ಕಟ್ಟಲಾಗಿದೆ. ೨೬ ಕಿ.ಮೀ. ಉದ್ದ ಇರುವ ಎಡದಂಡೆ ನಾಲೆಯಿಂದ ೧೨೧೪ ಹೆಕ್ಟೇರ್ ಹಾಗೂ ೨೦೦ ಕಿ.ಮೀ ಉದ್ದ ಇರುವ ಬಲದಂಡೆ ನಾಲೆಯಿಂದ ೪೪,೫೧೫ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಅಣೆಕಟ್ಟೆಯಿಂದ ಮುಳುಗಡೆ ಯಾಗಿರುವ ಹಳ್ಳಿಗಳಿಗೆ ೨೫ ಪುನರ್‌ವಸತಿ ಕಾಲೋನಿಗಳನ್ನು ನಿರ್ಮಿಸಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಕಬಿನಿ ಜಲಾಶಯದ ಮೂಲಕ ೨೪ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಜಲಾನಯನ ಪ್ರದೇಶವು ೨೧೪೨ ಕಿ.ಮೀ. ಇದೆ. ಈ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣವು ಪಶ್ಚಿಮ ಘಟ್ಟದಲ್ಲಿ ೧೨೫ ಇಂಚಿ ನಿಂದ ಅಣೆಕಟ್ಟಿನ ಹತ್ತಿರ ೩೨ ಇಂಚಿನವರೆಗೂ ಇರುತ್ತದೆ. ಜಲಾಶಯದ ಶೇಖರಣಾ ಸಾಮರ್ಥ್ಯ ೫೫೨೭ ದಶಲಕ್ಷ ಮೀ. ಅಣೆಕಟ್ಟೆಯ ಉದ್ದ ೨೭೩೨.೫೫ ಮೀ. (೮೯೬೫ ಅಡಿ), ಎತ್ತರ ೨೮.೯೬ ಮೀ. (೯೫ ಅಡಿ) ಇದೆ. ತಾಲ್ಲೂಕಿನ ಅತಿ ದೊಡ್ಡ ನದಿಯಾದ ಇದು ಕೇರಳದ ವೈನಾಡು ತಾಲ್ಲೂಕಿನ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ೨೩೦ ಕಿ.ಮೀ.

ದೂರಹರಿಯುತ್ತದೆ. ಇದಲ್ಲದೆ ಏತನೀರಾವರಿ ಯೋಜನೆ ಮೂಲಕವೂ ವ್ಯವಸಾಯಕ್ಕೆ ನೀರನ್ನು ಒದಗಿಸಲಾಗುತ್ತದೆ. ಗುಂಡ್ಲುಪೇಟೆ, ನಂಜನಗೂಡು, ಚಾಮರಾಜನಗರ, ತಿ.ನರಸೀಪುರ, ಯಳಂದೂರು ಹಾಗೂ ಕೊಳ್ಳೇಗಾಲ ತಾಲ್ಲೂಕಿನ ೩೮,೬೭೦ ಹೆಕ್ಟೇರ್ ಪ್ರದೇಶಕ್ಕೂ ಇದರ ನೀರನ್ನು ಒದಗಿಸಲಾಗುತ್ತದೆ. ಕಬಿನಿ ಜಲಾಶಯದ ಬಳಿ ಮೀನು ಕೃಷಿಕರಿಗಾಗಿ ಮೀನು ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

**ತಾರಕಾ ಜಲಾಶಯ :** ತಾರಕಾನದಿಯು ಪಶ್ಚಿಮ ಘಟ್ಟಗಳ ಅಂಚಿನ ಎತ್ತರ ಪರ್ವತ ಶ್ರೇಣಿಯಲ್ಲಿರುವ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ದೂರ ಹರಿದು (೬೪ ಕಿ.ಮೀ.) ೪೦ ಮೈಲಿ ಮಟಕೆರೆ ಗ್ರಾಮದ ಬಳಿ ಕಬಿನಿ ನದಿಯನ್ನು ಸೇರುತ್ತದೆ. ಹೆಗ್ಗಡದೇವನಕೋಟೆಗೆ ಐದು ಕಿ.ಮೀ ದೂರದಲ್ಲಿರುವ ಪೆಂಜಹಳ್ಳಿ ಗ್ರಾಮದ ಬಳಿ ತಾರಕಾನದಿಗೆ ಅಣೆಕಟ್ಟನ್ನು ಕಟ್ಟಿ ಜಲಾಶಯ ನಿರ್ಮಿಸಲಾಗಿದೆ. ಮಳೆಯ ಪ್ರಮಾಣ ಕಡಿಮೆಯಾಗಿ ನೀರಿನ ಸಂಗ್ರಹಣೆ ಕಡಿಮೆಯಾಗುತ್ತಿರುವುದರಿಂದ ಏತ ನೀರಾವರಿ ಯೋಜನೆಯಿಂದ ಜಮೀನಿಗೆ ನೀರನ್ನು ಒದಗಿಸಲಾಗುತ್ತಿದೆ. ಈ ನದಿಯ ಜಲಾನಯನ ಪ್ರದೇಶವು ೨೭೬.೬೧ ಚ.ಕಿ.ಮೀ. ಎಡದಂಡೆನಾಲೆಯು ೫೦ ಕಿ.ಮೀ. ಉದ್ದವಿದ್ದು ೨೪೨೬ ಹೆಕ್ಟೇರ್ ಜಮೀನು, ಬಲದಂಡೆ ನಾಲೆಯು ೩೭.೬೦ ಕಿ.ಮೀ. ಉದ್ದವಿದ್ದು ೪,೬೧೪ ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸಲಾಗುತ್ತಿದೆ. ಒಟ್ಟು ೧೭,೪೦೦ ಹೆಕ್ಟೇರ್ ಜಮೀನಿಗೆ ನೀರನ್ನು ಬದಗಿಸುವ ಉದ್ದೇಶವಿರುವ ಈ ಜಲಾಶಯದಲ್ಲಿ ನೀರಿನ ಸಾಮರ್ಥ್ಯ ೩.೯೪ ಟಿ.ಎಂ.ಸಿ. ಇದೆ. ಅಣೆಕಟ್ಟೆಯ ಉದ್ದ ೧,೨೭೨.೫ ಮೀಟರ್ ಇದ್ದು, ಎತ್ತರ ೩೨.೦೦ ಮೀಟರ್ ಇದೆ. ಈ ಯೋಜನೆಯನ್ನು ೧೯೭೪ರಲ್ಲಿ ಆರಂಭಿಸಲಾಗಿದೆ.

**ನುಗು ಜಲಾಶಯ :** ಇದು ಕಪಿಲಾನದಿಯ ಉಪನದಿಗಳಲ್ಲಿ ಒಂದು, ಹೆಗ್ಗಡದೇವನಕೋಟೆಗೆ ೧೫ ಕಿ.ಮೀ. ದೂರದಲ್ಲಿರುವ ಬೀರವಾಳ್ ಬಳಿ ಅಣೆಕಟ್ಟನ್ನು ಕಟ್ಟಿ ಜಲಾಶಯವನ್ನು ನಿರ್ಮಿಸಲಾಗಿದೆ, ನುಗು ನದಿಯನ್ನು ಭೃಗು ನದಿ ಎಂದೂ ಕರೆಯಲಾಗಿದೆ. ಇದು ಮಧ್ಯಮ ನೀರಾವರಿ ಯೋಜನೆಯಾಗಿದೆ. ೧೯೪೬ ರಲ್ಲಿ ಪ್ರಾರಂಭವಾದ ಈ ಯೋಜನೆ ೧೯೫೯ ರಲ್ಲಿ ಪೂರ್ಣಗೊಂಡಿದೆ. ಇದರ ಅಚ್ಚುಕಟ್ಟು ಪ್ರದೇಶ ೭೫೨೯ ಹೆಕ್ಟೇರ್, ನುಗು ಮೇಲ್ದಂಡೆ ನಾಲೆ (ಏತನೀರಾವರಿ) ೮೬.೯೦ ಕಿ.ಮೀ. ಉದ್ದವಿದ್ದು, ಎಡದಂಡೆನಾಲೆ ೩೩.೮೦ ಕಿ.ಮೀ. ಮತ್ತು ಬಲದಂಡೆನಾಲೆ ೩೮.೬೦ ಕಿ.ಮೀ. ಉದ್ದವಿದೆ. ಏತನೀರಾವರಿಯಿಂದ ೫೨೬೧ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಅಲ್ಲದೆ ೩ ಮೆಗಾವಾಟ್ ವಿದ್ಯುತ್ ಉತ್ಪಾದಿಸಬಹುದಾದ ವಿದ್ಯುತ್ ಉತ್ಪಾದನಾ ಕೇಂದ್ರವೂ ಇಲ್ಲಿದೆ.

**ಹೆಬ್ಬಳ್ಳ ಜಲಾಶಯ :** ಹೆಗ್ಗಡದೇವನಕೋಟೆಯಿಂದ ಉತ್ತರಕ್ಕೆ ಎರಡು ಕಿ.ಮಿ. ದೂರದಲ್ಲಿ ಈ ಕಟ್ಟೆಯನ್ನು ನಿರ್ಮಿಸಲಾಗಿದೆ. ಇದು ಮಧ್ಯಮ ನೀರಾವರಿ ಯೋಜನೆಯಾಗಿದ್ದು, ೧೯೬೬ರಲ್ಲಿ ಪೂರ್ಣಗೊಳಿಸಲಾಗಿದೆ. ಈ ಜಲಾಶಯಕ್ಕೆ ಎಡದಂಡೆ ನಾಲೆಯನ್ನು

ನಿರ್ಮಿಸಲಾಗಿದೆ. ಇದರಿಂದ ತಾಲೂಕಿನ ೨೮.೯೭ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಇವುಗಳಲ್ಲದೆ ತಾಲೂಕಿನಲ್ಲಿರುವ ಬರಲಹೊಳೆ, ಸಮಾನಹೊಳೆ, ದೊಡ್ಡ ಹೊಳೆ ಮೊದಲಾದುವು ತಾಲೂಕಿನ ಅನೇಕ ಹಳ್ಳಿಗಳ ಜಮೀನಿಗೆ ನೀರನ್ನು ಒದಗಿಸುತ್ತಿವೆ.

**ತೋಟಗಾರಿಕೆ :** ೨೦೦೬–೦೭ ನೇ ಸಾಲಿನಲ್ಲಿ ತೊಟಗಾರಿಕೆ ಇಲಾಖೆಯಿಂದ ರೈತರಿಗೆ ವಿವಿಧ ಸೌಲಭ್ಯಗಳು ಸಿಗುತ್ತಿದ್ದು ಅವುಗಳಲ್ಲಿ,

೧. ತೆಂಗು ಬೀಜ ಸಂಗ್ರಹಣೆ ಯೋಜನೆಯಲ್ಲಿ ರೈತರ ಬೇಡಿಕೆಯನ್ವಯ ಇಲಾಖೆಯು ನಿಗದಿಪಡಿಸಿದ ದರದಲ್ಲಿ ಉತ್ತಮಗುಣ ಮಟ್ಟದ ೨೦೦೦೦ ತೆಂಗಿನ ಸಸಿಗಳನ್ನು ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದಿಸಿ ನೀಡುವುದು.

೨. ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ ಯೋಜನೆಯಲ್ಲಿ ಉತ್ತಮ ಗುಣ ಮಟ್ಟದ ೬೦೦೦ ಸಪೋಟ ಮತ್ತು ೬೦೦೦ ಮಾವು ಸಸಿಗಳನ್ನು ಉತ್ಪಾದಿಸಿ ಯೋಗ್ಯಬೆಲೆಯಲ್ಲಿ ರೈತರಿಗೆ ಮಾರಾಟ ಮಾಡುವುದು.

೩. ತೆಂಗಿನ ಕಪ್ಪು ತಲೆಹುಳುವಿನ ನಿಯಂತ್ರಣಕ್ಕಾಗಿ ೮.೫ಲಕ್ಷ ಪರೋಪಜೀವಿಗಳನ್ನು ಉತ್ಪಾದಿಸಿ ರೈತರಿಗೆ ಉಚಿತವಾಗಿ ವಿತರಿಸುವುದು.

೪. ವಿವಿಧ ತೋಟಗಾರಿಕೆ ಬೆಳೆಗಳ ಬೇಸಾಯದ ಬಗ್ಗೆ ಕರಪತ್ರ ಮುದ್ರಿಸಿ ರೈತರಿಗೆ ಉಚಿತವಾಗಿ ವಿತರಿಸುವುದು. ತಾಲೂಕಿನ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುದು ಹಾಗೂ ಡಾ. ಎಂ. ಹೆಚ್. ಮರಿಗೌಡರ ಜನ್ಮದಿನವನ್ನು ತೋಟಗಾರಿಕೆ ದಿನವನ್ನಾಗಿ ಆಚರಿಸುವುದು.

೫. ಇಲಾಖೆಯ ಜಿಲ್ಲಾ ವಲಯ ಅಧೀನದ ೮೭ ಎಕರೆ ವಿಸ್ತೀರ್ಣದ ೧೦ ತೋಟಗಾರಿಕಾ ಕ್ಷೇತ್ರಗಳನ್ನು ನಿರ್ವಹಣೆ ಮಾಡುವುದು ಹಾಗೂ ಕ್ಷೇತ್ರಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯ ಕಲ್ಪಿಸುವುದು.

೬. ಜಿಲ್ಲೆಯ ಕೇಂದ್ರ ಕಛೇರಿಯಲ್ಲಿ ಮತ್ತು ವಿವಧ ತಾಲೂಕಿನ ಇಲಾಖೆಯ ಆಡಳಿತಕ್ಕೆ ಅವಶ್ಯವಿರುವ ಕಟ್ಟಡಗಳ ನಿರ್ಮಾಣ ದುರಸ್ತಿ ಕೈಗೊಳ್ಳುವುದು.

೭. ತೆಂಗು ಬೆಳೆಯ ಸಮಗ್ರ ನಿರ್ವಹಣೆಗೆ ೧೭೫೦೦ರೂಗಳ ಘಟಕ ವೆಚ್ಚದಲ್ಲಿ ಸುಮಾರು ೬೪ ಹೆಕ್ಟೇರ್‌ಗಳಿಗೆ ಜೈವಿಕಗೊಬ್ಬರ, ಬೇವಿನಹಿಂಡಿ, ರಸಾಯನಿಕ ಗೊಬ್ಬರ, ಜೈವಿಕಕೀಟನಾಶಕ ಅಂತರಬೆಳೆಯಾಗಿ ಕೋಕೋ, ಕರಿಮೆಣಸು ಗಿಡ ಹಾಗೂ ಪೋಷಕಾಂಶಗಳನ್ನು ಫಲಾನುಭವಿಗಳಿಗೆ ನೀಡುವುದು.

೮. ಶೇ. ೫೦ರ ಸಹಾಯಧನದಲ್ಲಿ ೩೫,೦೦೦ ರೂ.ಗಳಿಗೆ ಮೀರದಂತೆ, ನಾಲ್ವರು ಫಲಾನುಭವಿಗಳಿಗೆ ಡೀಸಲ್ ಜನರೇಟರ್ ೭.೫ ಕೆ.ವಿ. ೧೦ ಸಾವಿರ ರೂ. ಮೀರದಂತೆ, ೫ ಹೆಚ್.ಪಿ. ಡೀಸೆಲ್ ಪಂಪ್‌ಸೆಟ್ ಐವರು ಫಲಾನುಭವಿಗಳಿಗೆ

೧೨ ಸಾವಿರ ರೂ. ಮೀರದಂತೆ, ಇಬ್ಬರು ಫಲಾನುಭವಿಗಳಿಗೆ ಎಲೆ ಕತ್ತರಿಸುವ ಯಂತ್ರ ಹಾಗೂ ತಾಳೆ ಬೆಳೆಯುವ ರೈತರಿಗೆ ತರಬೇತಿ ನೀಡುವುದು.

೯. ತೋಟಗಾರಿಕೆ ಬೆಳೆಗಳ ಬೇಸಾಯ, ಸಂರಕ್ಷಣೆ ಪದ್ಧತಿ ಬಗ್ಗೆ ३೭೫ ರೈತ ಮಹಿಳೆ ಹಾಗೂ ಪುರುಷರಿಗೆ ಎರಡು ದಿನ ತರಬೇತಿ ನೀಡುವುದು.

೧೦. ಸರ್ಕಾರಿ ಕಛೇರಿಗಳ ಮುಂದಿಡಲು ಅಲಂಕಾರಿಕ ಗಿಡಗಳನ್ನು ಕುಂಡಗಳಲ್ಲಿ ಅಭಿವೃದ್ಧಿಪಡಿಸಿ ಉಚಿತವಾಗಿ ನೀಡುವುದು.

೧೧. ಜಮೀನು ಹೊಂದಿರುವ ರೈತರಿಗೆ ಒಂದು ಎಕರೆ ಪ್ರದೇಶಕ್ಕೆ ೧೦೦೦ ರೂ.ಗಳಿಗೆ ಮೀರದಂತೆ ಉಚಿತವಾಗಿ ಹಣ್ಣಿನ ಕಸಿ ಸಸಿಗಳನ್ನು ವಿತರಿಸುವುದು.

೧೨. ೨೦೦ ರೂ ಗಳಿಗೆ ಮೀರದಂತೆ ಶೇ. ೫೦ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿ ಖರೀದಿಗೆ ಸಹಾಯಧನ ನೀಡುವುದು.

೧೩. ೨೪೧ ಹಣ್ಣು ಮತ್ತು ತೆಂಗಿನ ತೋಟಗಳ ಸ್ಥಾಪನೆಗೆ ರೈತರಿಗೆ ಘಟಕ ವೆಚ್ಚವಾಗಿ ೧೫೦೦ ರೂ.ಗಳಿಗೆ ಗಿಡ, ಗೊಬ್ಬರ, ಔಷಧಿ ನೀಡುವುದು.

೧೪. ೧೪೩ ಹಣ್ಣಿನ ಹಾಗೂ ತೆಂಗಿನ ತೋಟ ಸ್ಥಾಪನೆಗೆ ರೈತರಿಗೆ ಘಟಕ ವೆಚ್ಚ ೧೫೦೦ ರೂ ಗಳಿಗೆ ಗಿಡ ಗೊಬ್ಬರ ಔಷಧಿ ನೀಡಲಾಗುವುದು. ಅಲ್ಲದೆ, ೨ನೇ ವರ್ಷದ ಪಾಲನೆಗೆ ೬೫೦ ರೂ. ೩ನೇ ವರ್ಷದ ಪಾಲನೆಗೆ ೩೫೦ ರೂ. ಗಳನ್ನು ನೀಡುವುದು.

ತಾಲೂಕು, ಫಲವತ್ತಾದ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾದ ಭೂಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನೂ ಬೆಳೆಯಲಾಗುತ್ತಿದೆ. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಶುಂಠಿ, ಅರಿಶಿನ ಮುಂತಾದವನ್ನು ರೈತರು ಒಟ್ಟು ೧೩೦೦ ಎಕರೆಗಳಲ್ಲಿ ಬೆಳೆಯುತ್ತಾರೆ. ಈ ತಾಲೂಕಿನ ತೋಟಗಾರಿಕೆ ಬೆಳೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮಾವಿನ ತೋಟಗಳನ್ನು ವ್ಯವಸ್ಥಿತವಾಗಿ ಬೆಳೆಸಿ ಆರ್ಥಿಕ ಲಾಭ ಪಡೆಯುತ್ತಿದ್ದಾರೆ. ಇವುಗಳಲ್ಲದೆ ಆಲೂಗಡ್ಡೆ, ಟೊಮ್ಯಾಟೋ, ಹುರುಳಿ, ಬದನೆ, ಸಪೋಟ, ಸೀಬೆ, ಪರಂಗಿ, ಮೆಣಸಿನಕಾಯಿ ಮೊದಲಾದ ತರಕಾರಿಗಳನ್ನೂ ಋತುಮಾನಗಳಿಗನುಸಾರವಾಗಿ ಹಂಪಾಪುರ ಹೋಬಳಿ, ಕಸಬಾ ಹೋಬಳಿ, ಕಂದಲಿಕೆ, ಅಂತರಸಂತೆ, ಸರಗೂರು ಹೋಬಳಿಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾರೆ. ೨೦೦೭-೦೮ರ ಸಾಲಿನಲ್ಲಿ ೧೦೫೧ ಹೆ.ನಲ್ಲಿ ಹಣ್ಣು ಬೆಳೆಯನ್ನು ಹಾಗೂ ೮೩೫ ಹೆ.ನಲ್ಲಿ ತರಕಾರಿಗಳನ್ನು ಬೆಳೆಯಲಾಗಿತ್ತು.

**ಪಶುಸಂಗೋಪನೆ**

ಬಹಳ ಹಿಂದಿನಿಂದಲೂ ರೈತರು ದನಕರು, ಎಮ್ಮೆ, ಆಡು ಕುರಿ, ಹಂದಿ, ಕೋಳಿ ಸಾಕಾಣಿಕೆಯನ್ನು ವ್ಯವಸಾಯ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು

ಉತ್ತಮಪಡಿಸಿಕೊಳ್ಳಲು ಉಪಕಸುಬಾಗಿ ಅವಲಂಬಿಸಿಕೊಂಡು ಬಂದಿದ್ದಾರೆ. ಇತ್ತೀಚೆಗಂತೂ ಹೈನುಗಾರಿಕೆ ಒಂದು ಉಪಕಸುಬಾಗಿ ರೈತರ ಆರ್ಥಿಕ ಬೆನ್ನೆಲುಬಾಗಿದೆ. ೨೦೦೯ ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೮೩ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ೧೩೮೦೦ ಸದಸ್ಯರಿದ್ದರು. ೨೦೦೭ರ ಜಾನುವಾರು ಗಣತಿಯ ತಾತ್ಕಾಲಿಕ ಅಂಕಿಅಂಶದಂತೆ ತಾಲೂಕಿನಲ್ಲಿ ಒಟ್ಟು ೧,೯೮,೧೮೮ ಜಾನುವಾರುಗಳಿದ್ದು, ವಿವರ ಕೆಳಕಂಡಂತಿದೆ. ಸ್ಥಳೀಯ ದನಕರುಗಳು ೧,೨೪,೪೦೨, ಮಿಶ್ರತಳಿ ಹಸುಗಳು ೧೧,೫೬೫, ಎಮ್ಮೆಗಳು ೨,೩೬೭, ಕುರಿಗಳು ೧೬,೨೪೩, ಮೇಕೆಗಳು ೩೮,೬೯೨, ಮೊಲಗಳು ೪,೮೩೯, ಕೋಳಿಗಳು ೬,೫೭,೦೮೫ ಗಳಿದ್ದು ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವಲ್ಲಿ ಸಹಕಾರಿಯಾಗಿರುವುದಲ್ಲದೆ ವ್ಯವಸಾಯ, ವ್ಯವಸಾಯಕ್ಕೆ ಬೇಕಾದ ಗೊಬ್ಬರಗಳನ್ನು ಪೂರೈಸುವಲ್ಲಿ ಪ್ರಧಾನವಾಗಿವೆ.

ಜಿಲ್ಲೆಯಲ್ಲಿರುವ ಜಾನುವಾರು ಹಾಗೂ ಇತರೇ ಸಂಪತ್ತನ್ನು ಸಂವರ್ಧಿಸಿ ತನ್ಮೂಲಕ ಅವುಗಳ ಉತ್ಪಾದಕತೆಯನ್ನು ಹೆಚ್ಚಿಸಲು ಪಶುಪಾಲನಾ ಇಲಾಖೆಯು ಪ್ರಯತ್ನಿಸುತ್ತಿದ್ದು, ಇದರಿಂದ ಜನಸಾಮಾನ್ಯರಿಗೆ ಉದ್ಯೋಗಾವಕಾಶ ದೊರಕುವಂತಾಗಿ ಅವರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಾಧ್ಯವಾಗಿದೆ. ಜಿಲ್ಲೆಯಲ್ಲಿ ಕ್ಷೀರೋತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮೂಲಕ ಉತ್ತಮ ಗುಣಮಟ್ಟದ ಮಿಶ್ರತಳಿ ಹಸು ಮತ್ತು ಸುಧಾರಿತ ಎಮ್ಮೆ ತಳಿಗಳನ್ನು ವೃದ್ಧಿಸುವ ಮಹತ್ತರ ಕಾರ್ಯದಲ್ಲಿ ಇಲಾಖೆಯು ತೊಡಗಿದೆ. ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ ಹಾಗೂ ಮೇವು ಅಭಿವೃದ್ಧಿ ಮುಂತಾದ ಯೋಜನೆಗಳ ಅನುಷ್ಠಾನ, ತರಬೇತಿ ಇತ್ಯಾದಿ ಚಟುವಟಿಕೆಗಳನ್ನು ಇಲಾಖೆಯು ನಡೆಸಿಕೊಂಡು ಬರುತ್ತಿದೆ. ಸಾಕುಪ್ರಾಣಿಗಳಿಗೆ ಬರುವ ರೋಗ-ರುಜಿನಗಳನ್ನು ಪಶುವೈದ್ಯಶಾಲೆಗಳು ನೋಡಿಕೊಳ್ಳುತ್ತಿದ್ದು, ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಎರಡು ಪಶುವೈದ್ಯಕೀಯ ಆಸ್ಪತ್ರೆ, ೧೦ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು. ಏಳು ಚಿಕಿತ್ಸಾಲಯಗಳು, ಒಂದು ಸಂಚಾರಿ ಚಿಕಿತ್ಸಾಲಯ ಹಾಗೂ ಒಂದು ಕೃತಕ ಗರ್ಭಧಾರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಪಶು ವೈದ್ಯಕೀಯ :** ಹೆಗ್ಗಡದೇವನಕೋಟೆ ತಾಲೂಕಿನ ಪಶುವೈದ್ಯಕೀಯ ಕೇಂದ್ರಗಳ ವಿವರ :

೧. ಪಶು ವೈದ್ಯಕೀಯ ಆಸ್ಪತ್ರೆ : ಹೆಚ್.ಡಿ. ಕೋಟೆ ಹಾಗೂ ಸರಗೂರು

೨. ಪಶು ಚಿಕಿತ್ಸಾಲಯ : ಅ) ಸರಗೂರು, ಆ) ಹಂಪಾಪುರ, ಇ) ಬೀಚನಹಳ್ಳಿ, ಈ) ಮನುಗನಹಳ್ಳಿ, ಉ) ಮಾದಾಪುರ

೩. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ : ಅ) ಮೇಟಿಕುಪ್ಪೆ, ಆ) ಎನ್. ಬೆಳ್ತೂರು, ಇ) ಚಿಕ್ಕೆರೆಯೂರು, ಈ) ಬಡಗಲಪುರ, ಉ) ಬಿ.ಮಟಕೆರೆ, ಊ) ಮುಳ್ಳೂರು,

ಋ) ಚಿನ್ನಗುಂಡಿ, ಎ) ಆಲನಹಳ್ಳಿ, ಏ) ಎನ್.ಬೇಗೂರು, ಐ) ಹೆಗ್ಗನೂರು, ಒ) ಕೆ.ಬೆಳ್ತೂರು

೪. ಸಂಚಾರಿ ಪಶುಚಿಕಿತ್ಸಾಲಯ : ಹೆಗ್ಗಡದೇವನಕೋಟೆ

**ಕೃತಕ ಗರ್ಭಧಾರಣೆ ಮಾಹಿತಿ**
**೨೦೦೫-೦೬**

| ವೀರ್ಯ ನಳಿಕೆಗಳ ವಿವರ | ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ | ವೀರ್ಯ ನಳಿಕೆಗಳ ವಿವರ | ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ |
|---|---|---|---|
| ಹೆಚ್.ಎಫ್. ಕ್ರಾಸ್ | ೨೫೭೩ | ಹೆಚ್.ಎಫ್.ಕ್ರಾಸ್ | ೨೪೨೪ |
| ಜರ್ಸಿ ಕ್ರಾಸ್ | ೩೨೨೦ | ಜರ್ಸಿ ಕ್ರಾಸ್ | ೨೧೯೮ |
| ಹಳ್ಳಿ ಕಾರ್ | ೧೬೭೪ | ಹಳ್ಳಿಕಾರ್ | ೧೪೮೫ |
| ಸುರ್ತಿ | ೩೧೦ | ಸುರ್ತಿ | ೩೭೮ |

**ಅಭಿವೃದ್ಧಿ ಯೋಜನೆಗಳು :** ಜಿಲ್ಲೆಯಲ್ಲಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರಿಗೆ, ಸಣ್ಣ ಹಾಗೂ ಅತಿಸಣ್ಣ ಹಿಡುವಳಿದಾರರಿಗೆ, ಭೂರಹಿತ ಕೃಷಿಕಾರ್ಮಿಕರಿಗೆ, ಆರ್ಥಿಕವಾಗಿ ದುರ್ಬಲರಾದವರಿಗೆ ಮತ್ತು ಮಹಿಳೆಯರಿಗಾಗಿ ಇಲಾಖೆಯು ಜಿಲ್ಲಾ ಪಂಚಾಯತ್ ನೆರವಿನಿಂದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯ ಪ್ರಯೋಜನವು ಅರ್ಹ ಫಲಾನುಭವಿಗಳನ್ನು ತಲುಪುವಂತೆ ಮಾಡಲು ಶ್ರಮಿಸುತ್ತಿದೆ. ಇವುಗಳಲ್ಲಿ ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಜಾನುವಾರು ಚಿಕಿತ್ಸಾ ಶಿಬಿರ, ಗಿರಿರಾಜ ಕೋಳಿ ಸಾಕಾಣಿಕೆ ಮತ್ತು ಮೇವು ಅಭಿವೃದ್ಧಿ ಕಾರ್ಯಕ್ರಮ ಇವೇ ಮೊದಲಾದ ಹಲವಾರು ಜನಪ್ರಿಯ ಯೋಜನೆಗಳಾಗಿರುತ್ತವೆ.

**ವಿಶೇಷ ಘಟಕ ಯೋಜನೆ :** ಈ ಯೋಜನೆಯು ತಾಲೂಕಿನಲ್ಲಿ ಅನುಷ್ಠಾನದಲ್ಲಿದ್ದು ಆಯಾ ವರ್ಷ ಗ್ರಾಮಸಭೆಯಲ್ಲಿ ಆಯ್ಕೆಯಾಗಿ; ತಾಲೂಕು ಪಂಚಾಯತ್ ವತಿಯಿಂದ ಅನುಮೋದಿಸಲ್ಪಟ್ಟ ಗ್ರಾಮ-ಗುಂಪುಗಳ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಮಿಶ್ರತಳಿ ಹಸುಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ. ತಲಾ ಖರೀದಿ ವೆಚ್ಚವು ಶೇಕಡ ೬೦ ರಷ್ಟು ಸಹಾಯಧನ ಹಾಗೂ ಶೇಕಡ ೪೦ ರಷ್ಟು ಸಾಲ ಒಳಗೊಂಡಿರುತ್ತದೆ. ಈ ಯೋಜನೆಯಲ್ಲಿ ಮಹಿಳೆಯರಿಗೆ ಶೇಕಡ ೩೦ ರಷ್ಟು ಮೀಸಲಾತಿ ಇರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ೨೦೦೪ - ೨೦೦೫ನೇ ಸಾಲಿನ ರಾಜ್ಯ ವಲಯದಡಿ ರೂ. ೦.೮೬೪ ಲಕ್ಷ ಅನುದಾನವನ್ನು ಬಿಡುಗಡೆ ಮಾಡಿರುವ ಕಾರಣ ರೂ. ೮೬,೪೦೦ ಖರ್ಚು ಮಾಡಿ ಒಟ್ಟು ೧೨ ಮಿಶ್ರತಳಿ ಹಸುಗಳ ಖರೀದಿಯನ್ನು ಅನುಷ್ಠಾನಗೊಳಿಸಿ ಗುರಿ ಸಾಧಿಸಲಾಗಿದೆ. ೨೦೦೫-೦೬ನೇ ಸಾಲಿನಲ್ಲಿ ರೂ. ೦.೨೯ ಸಾವಿರ ಮಾತ್ರ

ಬಿಡುಗಡೆಯಾಗಿದ್ದು ಇದರಲ್ಲಿ ಎರಡು ಹಸುಗಳನ್ನು ಮಾತ್ರ ಖರೀದಿಸಲು ನೆರವಾಗುವ ಮೂಲಕ ಅನುಷ್ಠಾನಗೊಳಿಸಲಾಗಿದೆ.

**ಗಿರಿಜನ ಉಪಯೋಜನೆ (ರಾಜ್ಯ) :** ಈ ಯೋಜನೆಯು ತಾಲೂಕಿನಲ್ಲಿ ಕಾರ್ಯರೂಪಗೊಂಡಿದ್ದು ಆಯಾ ವರ್ಷದಲ್ಲಿ ಗ್ರಾಮಸಭೆಯಲ್ಲಿ ಆಯ್ಕೆಯಾಗಿ ತಾಲೂಕು ಪಂಚಾಯಿತಿಯಿಂದ ಅನುಮೋದಿಸಲ್ಪಡುವ ಗಿರಿಜನ ಫಲಾನುಭವಿಗಳಿಗೆ, ರೇಷ್ಮೆ ಹುಳುಮೇಯಿಸುವ ಘಟಕಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ. ತಲಾ ಘಟಕದ ವೆಚ್ಚವು ಶೇಕಡ ೭೫ ರಷ್ಟು ಸಹಾಯಧನ ಹಾಗೂ ಶೇಕಡ ೨೫ ರಷ್ಟು ಸಾಲದ ಅಂಶ ಒಳಗೊಂಡಿರುತ್ತದೆ. ಈ ಯೋಜನೆಯಲ್ಲಿ ಶೇಕಡ ೩೦ ರಷ್ಟು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯತಿಯಿಂದ ೨೦೦೪-೦೫ನೇ ಸಾಲಿನಲ್ಲಿ ಲಕ್ಷ ರೂ. ೧.೧೭ ಅನುದಾನವನ್ನು ಬಿಡುಗಡೆ ಮಾಡಿದ್ದು, ಅದರಿಂದ ಒಟ್ಟು ೨೧ ಹುಳುಮೇಯಿಸುವ ಘಟಕಗಳನ್ನು ಅನುಷ್ಟಾನಗೊಳಿಸಿ ಪ್ರಗತಿ ಸಾಧಿಸಲಾಗಿದೆ. ೨೦೦೫-೦೬ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

**ಮೀನುಗಾರಿಕೆ**

**ಹೆಚ್.ಡಿ. ಕೋಟೆ ತಾಲೂಕಿನ ಮೀನುಗಾರಿಕೆ ಇಲಾಖೆ ವಿವರ :**

| ೧. ಕೆರೆಗಳ ವಿಲೇವಾರಿ | | ಆದಾಯ |
|---|---|---|
| ಎ. ಮಹಾಮಂಡಳಿ ಗುತ್ತಿಗೆ | ೨ ಕೆರೆಗಳು | ೭೭,೬೭೨-೦೦ |
| ಬಿ. ಟೆಂಡರ್ ಕಂ ಹರಾಜು | ೧೧ ಕೆರೆಗಳು | ೧೪೦೬೮೯-೦೦ |
| ಸಿ. ನುಗು ಜಲಾಶಯ | -- | ೧೨೫೨೩೫-೦೦ |
| | | **ರೂ. ೩೪೩೫೧೬-೦೦** |

ಒಂಭತ್ತು ಕೆರೆಗಳಲ್ಲಿ ೨೧.೩೪ ಲಕ್ಷ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಶೇ. ೫೦ ಸಹಾಯಧನ ೧೩೦೦೦ ರೂಗಳು, ೦.೬೫ ಲಕ್ಷ ಬಿತ್ತನೆ ಮೀನುಮರಿಗಳನ್ನು ಕೊಡಲಾಗುತ್ತದೆ.

**ಕಬಿನಿ ಕೈಗಾರಿಕಾ ವಸತಿ ಪ್ರದೇಶ ಮೀನುಮರಿ ಉತ್ಪಾದನಾ ಕೇಂದ್ರ :** ಈ ಮೀನುಮರಿ ಉತ್ಪಾದನಾ ಕೇಂದ್ರದಿಂದ ಅಕ್ಟೋಬರ್ ಮಾಹೆಯ ಅಂತ್ಯದವರೆಗೆ ೩೮ ಲಕ್ಷ ಸ್ಪಾನ್‌ಮರಿ ಉತ್ಪಾದಿಸಲಾಗಿದ್ದು, ೧೫-೫೦ ಲಕ್ಷ ಸ್ಪಾನ್ ವಿತರಿಸಲಾಗಿದೆ. ಉಳಿದ ೨೫-೫೦ ಲಕ್ಷ ಸ್ಪಾನ್‌ಮರಿಗಳನ್ನು ಫಾರಂನಲ್ಲಿ ಪಾಲನೆ ಮಾಡಿ ಕೆಳಕಂಡ ವಿವಿಧ ಜಾತಿಯ ಬಿತ್ತನೆ ಮೀನು ಮರಿಗಳನ್ನು ಮೀನು ಕೃಷಿಕರಿಗೆ ಮಾರಾಟ ಮಾಡಲಾಗಿದೆ.

ಕಾಟ್ಲ – ೧.೨೦ ಲಕ್ಷ, ರೋಹು – ೧.೬೫ ಲಕ್ಷ, ಮೃಗಾಲ್–೦.೬೪ ಲಕ್ಷ, ಸಾಮಾನ್ಯಗೆಂಡೆ – ೩.೧೩ ಲಕ್ಷ, ಒಟ್ಟು ೬.೬೨ ಲಕ್ಷ (ಸಂಖ್ಯೆಗಳಲ್ಲಿ)

ಸರ್ಕಾರವು ಕೆರೆಗಳನ್ನು ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣದ ಆಧಾರದ ಮೇಲೆ ೨ ಗುಂಪಾಗಿ ವಿಂಗಡಿಸಿದೆ. ೪೦ ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವ ಕೆರೆಗಳನ್ನು ಮೀನುಗಾರಿಕೆ ಇಲಾಖೆ ವ್ಯಾಪ್ತಿಗೂ ಹಾಗೂ ೪೦ ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವ ಕೆರೆಗಳನ್ನು ಗ್ರಾಮಪಂಚಾಯಿತಿ ವ್ಯಾಪ್ತಿಗೂ ವಹಿಸಲಾಗಿದೆ. ಮೀನುಗಾರಿಕೆ ಇಲಾಖೆ ಕೆರೆಗಳನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಗ್ರಾಮಪಂಚಾಯಿತಿ ಕೆರೆಗಳ ವಿಲೇವಾರಿ, ಮೀನುಮರಿ ದಾಸ್ತಾನು, ಮೀನು ಹಿಡುವಳಿ ಹಾಗೂ ಇನ್ನಿತರ ತಾಂತ್ರಿಕ ಸೌಲಭ್ಯಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ನೀಡಲಾಗುತ್ತದೆ.

* * * *